ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ

156 (511) ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕರ್ನಾಟಕ ಹೌಸಿಂಗ್ ಬೋರ್ಡ್, ಬಿಡಿಎ, ಜಲ ಮಂಡಳಿ, ನಗರ ನೀರು ಸರಬರಾಜು ಮಂಡಳಿ ಹಾಗೂ ಬೆಂಗಳೂರು ನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಿಗಳು ಕೈಗೊಳ್ಳುವ ಯಾವ ಯಾವ ಕಾಮಗಾರಿಗಳಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕಾಗಿದೆ;

ಆ) ಇತ್ತೀಚಿನ ವರ್ಷಗಳಲ್ಲಿ ಇವುಗಳು ಕೈಗೊಳ್ಳುವ ಯಾವುದೇ ಕಾಮಗಾರಿಗಳಿಗೂ ಮಂಡಳಿಯ ಅನುಮತಿ ಪಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ

(i) ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಪ್ರದೇಶಾಭಿವೃದ್ಧಿ ಮಂಡಳಿಗಳು ಈ ಕೆಳಗಿನ ಕಾಮಗಾರಿ ಚಟುವಟಿಕೆಗಳಿಗೆ ಸಮ್ಮತಿ ಪತ್ರ ಪಡೆಯಬೇಕಾಗಿರುತ್ತದೆ.

- ವಸತಿ ಕಟ್ಟಡ ಕಾಮಗಾರಿ–50 ಮನೆಗಳು ಅಥವಾ 5000 ಚದುರ ಮೀಟರ್ ಮೇಲ್ಪಟ್ಟು ಕಟ್ಟಲಾಗುವ ಪ್ರದೇಶ
- ವಸತಿ ಬಡಾವಣೆ–10 ಎಕರೆ ಮೇಲ್ಪಟ್ಟು
- ವಾಣಿಜ್ಯ ಕಟ್ಟಡ–2000 ಚದುರ ಮೀಟರ್ ಮೇಲ್ಪಟ್ಟು

(ii) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗಳು ರೊಚ್ಚು ನೀರು ಶುದ್ಧೀಕರಣ ಘಟಕ ಸ್ಥಾಪನೆಗೆ ಸಮ್ಮತಿ ಪತ್ರ ಪಡೆಯಬೇಕಾಗಿರುತ್ತದೆ.

ಆ) –ಇಲ್ಲ–

ಇ) ಉದ್ಭವಿಸುವುದಿಲ್ಲ.

ಶ್ರೀ.ಪಿ.ಸಿ. ಮೋಹನ್ : ಮಾನ್ಯ ಉಪಾಧ್ಯಕ್ಷರೆ, 'ಇತ್ತೀಚಿನ ವರ್ಷಗಳಲ್ಲಿ ಇವುಗಳು ಕೈಗೊಳ್ಳುವ ಯಾವುದೇ ಕಾಮಗಾರಿಗಳಿಗೂ ಮಾಲಿನ್ಯ ನಿಯಂತ್ರಣ

ಮಂಡಳಿಯ ಅನುಮತಿ ಪಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ನನ್ನ ಪ್ರಶ್ನೆಗೆ 'ಇಲ್ಲ'ವೆಂದು ಮಾನ್ಯ ಸಚಿವರು ಉತ್ತರಿಸಿದ್ದಾರೆ. ಆದರೆ ಏಪ್ರಿಲ್ 23ನೇ ತಾರೀಖು ಮಂಡಳಿಯ ಅಧ್ಯಕ್ಷರು ಪತ್ರಿಕಾ ಗೋಷ್ಠಿಯೊಂದರಲ್ಲಿ 'ಇಲಾಖೆಗಳಿಂದ ನಿಯಮ ಒಲ್ಲಂಘನೆ–ಮಂಡಳಿ ಎಚ್ಚರಿಕೆ' ಖಾಸಗಿ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವ ಮಾದರಿಯಲ್ಲಿಯೇ ಸರ್ಕಾರದ ಇಲಾಖೆಗಳ ವಿರುದ್ಧ ಸಹಿತ ಕ್ರಮ ಜರುಗಿಸಲಾಗುವುದು' ಎಂದು ಹೇಳಿದ್ದರು. ಇದು ತಮ್ಮ ಗಮನಕ್ಕೆ ಬಂದಿಲ್ಲವೇ ? ಅಥವಾ ಮಂಡಳಿಯ ಅಧ್ಯಕ್ಷರು ಹೇಳಿಕೆ ನೀಡಿರುವುದು ತಪ್ಪೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದ ಹಾಗೆ, ನಾವು ಈಗಾಗಲೇ Housing Board, BDA, ನಗರ ನೀರು ಸರಬರಾಜು ಮಂಡಳಿ ಮತ್ತು ಬೆಂಗಳೂರು ನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳಿಗೆ Environment Certificate ಅನ್ನು ತೆಗೆದುಕೊಳ್ಳಲೇಬೇಕೆಂದು ಕಡ್ಡಾಯಮಾಡಿದ್ದೇವೆ. ಹಿಂದೆ ಕೆಲವರು ತೆಗೆದುಕೊಂಡಿದ್ದರು, ಕೆಲವರು ತೆಗೆದುಕೊಂಡಿರಲಿಲ್ಲ. ಆದರೆ ಈಗ ಎಲ್ಲರೂ ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕೆಂದು ಆದೇಶ ಮಾಡಿದ್ದೇವೆ. ಆ ಪ್ರಕಾರ ಇವತ್ತು ಎಲ್ಲಾ ಕಡೆಯಲ್ಲಿಯೂ ಕ್ರಮ ತೆಗೆದುಕೊಂಡಿದ್ದೇವೆ. ಯಾರೂ ಅನುಮತಿ ಪಡೆದಿಲ್ಲವೋ, ಅಂತಹವರ ವಿರುದ್ಧ ಇವತ್ತು criminal case ಹಾಕಿ, ಅವರ ಕೆಲಸವನ್ನು ನಿಲ್ಲಿಸಬೇಕೆಂದು ಆದೇಶ ಮಾಡಿದ್ದೇವೆ. ಆ ಪ್ರಕಾರ ಬೆಂಗಳೂರಿನಲ್ಲಿ 5000 ಚದುರ ಮೀಟರ್ ಮೇಲ್ಪಟ್ಟು ಕಟ್ಟಲಾಗುವ ಪ್ರದೇಶ ಅಥವಾ 50 appartmentಗಳಿಗಿಂತ ಹೆಚ್ಚಿಗೆ ಕಟ್ಟುವುದಿದ್ದರೆ, ಅದಕ್ಕೆ compulsory ಆಗಿ environment clearance ಬೇಕೇ ಬೇಕು. ಆ ರೀತಿ ಒಂದು ಆದೇಶ ಮಾಡಿದ್ದೇವೆ. ಆ ಪ್ರಕಾರ ಏನಾದರೂ ಉಲ್ಲಂಘನೆ ಆಗಿದ್ದರೆ, ಆ ಬಗ್ಗೆ ಮಾನ್ಯ ಶಾಸಕರು ಸರ್ಕಾರದ ಗಮನಕ್ಕೆ ತಂದರೆ, ಅಂತಹವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ.ಸಿ. ಮೋಹನ್ : ಮಾನ್ಯ ಉಪಾಧ್ಯಕ್ಷರೆ, ನಾನು private ಅವರ ಬಗ್ಗೆ ಕೇಳಲಿಲ್ಲ. ಸರ್ಕಾರಿ ಇಲಾಖೆಗಳಿಂದಲೇ ನಿಯಮದ ಉಲ್ಲಂಘನೆಯಾಗಿದೆ, ಅವುಗಳ ವಿರುದ್ಧ ನೀವು ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ : ಈಗಾಗಲೇ ನಾವು BDA ಮತ್ತು ಜಲ ಮಂಡಳಿ ಮೇಲೆ ಅನೇಕ ಕೇಸ್‌ಗಳನ್ನು ಹಾಕಿದ್ದೇವೆ. ಈಗಾಗಲೇ ಆದೇಶವನ್ನೂ ಸಹ ನಾವು ಮಾಡಿದ್ದೇವೆ. Compulsory ಆಗಿ Environment Clearence ತೆಗೆದುಕೊಳ್ಳಲೇಬೇಕೆಂದು ಹೇಳಿದ್ದೇವೆ. ಆ ಪ್ರಕಾರ BDA, Housing Board, Water Supply Baord, Marketing Deportment, Archaeology

Departmentನವರು ಮತ್ತು ಇತರ ಸಂಸ್ಥೆಗಳು ಎಲ್ಲಾ ಕಡೆಗಳಲ್ಲಿಯೂ ಅನುಮತಿ ಪಡೆದುಕೊಳ್ಳುತ್ತಿವೆ. ನಿಯಮ ಉಲ್ಲಂಘನೆ ಮಾಡಿದವರ ವಿರುದ್ಧ ಕ್ರಿಮಿನಲ್ ಕೇಸ್‌ಗಳನ್ನು ಹಾಕುತ್ತಿದ್ದೇವೆ. ಬೆಂಗಳೂರಿನಲ್ಲಿ ಬಹಳ ಅನ್ಯಾಯವಾಗಿತ್ತು. Corporation Market ನೋಡಲಿಕ್ಕಾಗುತ್ತಿರಲಿಲ್ಲ, Hospitals ನೋಡಲಿಕ್ಕೆ ಆಗುತ್ತಿರಲಿಲ್ಲ. ಅದರ ಬಗ್ಗೆ ಕ್ರಿಮಿನಲ್ ಕೇಸ್‌ಗಳನ್ನೂ ಹಾಕಿ, ಅದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು suspend ಮಾಡಿದ್ದೇವೆ. Water Supply Board ಮೇಲೂ ಸಹ ಕೇಸ್‌ಗಳನ್ನು ಹಾಕಿದ್ದೇವೆ. ಹೀಗಾಗಿ ಇವತ್ತು ಎಲ್ಲರೂ ಕೂಡ ಅನುಮತಿ ಪತ್ರಗಳನ್ನು ಪಡೆಯುತ್ತಿದ್ದಾರೆ. ಹಿಂದೆ ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಈ ರೀತಿ ಅನುಮತಿ ಪಡೆಯಬೇಕಾದ ಅಗತ್ಯವಿಲ್ಲವೆಂದು ತೀರ್ಮಾನವಾಗಿತ್ತು. ಅದರ ಪ್ರಕಾರ ಅವರೇನೂ ಅನುಮತಿ ಪಡೆಯಬೇಕಾಗಿಲ್ಲ. ಅವರನ್ನು ಹೊರತು ಪಡಿಸಿ, ಸರ್ಕಾರದ ವಿವಿಧ ಇಲಾಖೆಗಳು ಸಾರ್ವಜನಿಕರಿಗೆ ಅನುಕೂಲ ಮಾಡಲು ಕೈಗೊಳ್ಳುವಂತಹ ಎಲ್ಲಾ ಕಾಮಗಾರಿಗಳಿಗೂ ಮಾಲಿನ್ಯ ಮಂಡಳಿಯ clearance ಬೇಕೇ ಬೇಕು ಎಂದು ನಿಯಮ ಮಾಡಿದ್ದೇವೆ. ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವಂತಹ ಆದೇಶವನ್ನೂ ಕೂಡ ಮಾಡಿದ್ದೇವೆ.

ಶ್ರೀ ಸಿ.ಟಿ. ರವಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರಿಗೆ ಒಂದು ಉಪ ಪ್ರಶ್ನೆ ಕೇಳಬಯಸುತ್ತೇನೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಮತ್ತು ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದರೆ ಈಗ ಮಾನ್ಯ ಸಚಿವರು ಸದನಕ್ಕೆ ನೀಡಿದ ಉತ್ತರದಲ್ಲಿ, ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ, ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದೇವೆಂದು ಹೇಳುತ್ತಿದ್ದಾರೆ. ಅವರು writing ನಲ್ಲಿ ಕೊಟ್ಟಿರುವ ಉತ್ತರ ಸರಿಯೋ ? ಅಥವಾ ಅವರು ಈಗ ಇಲ್ಲಿ ಹೇಳಿದ್ದು ಸರಿಯೋ ? ಅವರು ಕೊಟ್ಟಿರುವ ಉತ್ತರದಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಮತ್ತು ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಕ್ರಿಮಿನಲ್ ಕೇಸ್ ಹಾಕಿದ್ದರೆ, ಎಷ್ಟು ಇಲಾಖೆಗಳ ಮೇಲೆ ಹಾಕಿದ್ದಾರೆ ? ಯಾರ ಮೇಲೆ ಹಾಕಿದ್ದಾರೆ ?

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರವಿಯವರು ಕೇಳಿದ ಹಾಗೆ, ಈಗಾಗಲೇ Water Supply Board ಮೇಲೆ ನಾವು ಕೇಸ್ ಹಾಕಿದ್ದೇವೆ. BDA ಮೇಲೂ ಕೂಡ ಈಗಾಗಲೇ ಕೇಸ್ ಅನ್ನು ಹಾಕಿದ್ದೇವೆ. Housing Board ಬಗ್ಗೆಯೂ ಕೂಡ ಇವತ್ತು ನಾವು ಈಗಾಗಲೇ circular ಕಳುಹಿಸಿಕೊಟ್ಟು, ಅವರು ಎಲ್ಲೆಲ್ಲಿ lay out ಗಳನ್ನು ಮಾಡಿದ್ದಾರೋ, ಅದಕ್ಕೆಲ್ಲಾ clearance ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ನಾವು ಕ್ರಮ

ತೆಗೆದುಕೊಂಡಿದ್ದೇವೆ. ಆದರೆ ಅದು ಉತ್ತರದಲ್ಲಿ ಬಂದಿಲ್ಲ. ಉತ್ತರವನ್ನು rectify ಮಾಡಿ ಮಾನ್ಯ ಸದಸ್ಯರಿಗೆ ನಾನು ಕಳುಹಿಸಿಕೊಡುತ್ತೇನೆ.

ಲಾಲಾಜಿ ಮೆಂಡನ್, ಸಿದ್ದು ಸಾವದಿ ಗೈರು ಹಾಜರಿ

ಸಭೆಗಳಿಗೆ ಹಾಜರಿ

(1381) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಹಾಸನ ಜಿಲ್ಲೆಯಲ್ಲಿ ಕರ್ನಾಟಕ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಕುರಿತು ನಡೆಸುವ ಸಭೆಗಳು ವರ್ಷಕ್ಕೆ ಎಷ್ಟು ಬಾರಿ ನಡೆಯುತ್ತವೆ;

ಆ) ಈ ಸಭೆಗಳಿಗೆ ಅಪೇಕ್ಷಿತರಿರುವ ಇಲಾಖೆ ಹಾಗೂ ಅಧಿಕಾರಿಗಳು ಯಾರ್ಯಾರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಈ ಸಭೆಯಲ್ಲಿ ಹಾಜರಿರುವಂತೆ ಸೂಚನೆ ನೀಡಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಜಿಲ್ಲಾ ಪಟ್ಟದ ಸಭೆಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಾಗುತ್ತಿರುವುದು ನಿಜವೇ;

ಈ) ನಿಜವಾಗಿದ್ದಲ್ಲಿ, ಅರಸೀಕೆರೆ ತಾಲ್ಲೂಕು ಒಳಗೊಂಡಂತೆ ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ 3–4 ಬಾರಿ ಸಭೆಗೆಂದು ಹೋಗುತ್ತಿರುವುದರ ಔಚಿತ್ಯವೇನು.

ಉ) ಇದರಿಂದಾಗಿ ಕಛೇರಿಗಳಲ್ಲಿ ಅಧಿಕಾರಿಗಳಿಲ್ಲದೆ ಸಾರ್ವಜನಿಕರ ಹಾಗೂ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಭೆಗಳನ್ನು ನಡೆಸಲು ಇರುವ ಮಾರ್ಗ ಸೂಚಿ–ಮಾನದಂಡಗಳೇನು. ಇವುಗಳನ್ನು ಪಾಲಿಸದಿರಲು ಕಾರಣಗಳೇನು;

ಊ) ಜಿಲ್ಲಾ ಮಟ್ಟದ ಸಭೆಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳ ಅಗತ್ಯವಿದೆಯೇ, (ವಿವರ ಒದಗಿಸುವುದು).

ಶ್ರೀ ರಾಮಚಂದ್ರ ಗೌಡ (ಯೋಜನಾ ಸಚಿವರು)

ಅ) ಕರ್ನಾಟಕ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಕುರಿತು ತಿಂಗಳಿಗೆ ನಡೆಯುತ್ತವೆ.

ಆ) ಮತ್ತು ಇ) ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು ಕೆಡಿಪಿ ಸಭೆಗೆ ಹಾಜರಾಗಬೇಕಾಗುತ್ತದೆ. ತಾಲ್ಲೂಕು ಮಟ್ಟದ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಪರಿಶೀಲಿಸಲು ಸಭೆಗೆ ಆಹ್ವಾನಿಸಲಾಗುವುದು.

ಈ) ಹಾಸನ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಎಲ್ಲ ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ 3–4 ಬಾರಿ ಸಭೆಗೆ ಹಾಜರಾಗುತ್ತಿಲ್ಲವೆಂದು ತಿಳಿಸಿರುತ್ತಾರೆ.

ಉ) ಉದ್ಭವಿಸುವುದಿಲ್ಲ.